ಅದೂ ಒಂದು ಕಲೆ, ಅದಕ್ಕೂ ಒಂದು ಭಾಷೆ ಇದೆ, ಅದರದ್ದೇ ಆದ ವ್ಯಾಖ್ಯಾನಗಳಿವೆ ಎಂದು ಅರ್ಥಮಾಡಿಕೊಂಡು ವೀಕ್ಷಿಸಲು ಆರಂಭಿಸಿದರೆ ಆಗ ಅದರಿಂದ ಸಿಗುವ ಸಮಾಧಾನ, ಸಂತೋಷ, ತೃಪ್ತಿ ಅಗಣಿತ.

ಸಿನಿಮಾ ವಿಷಯಕ್ಕಷ್ಟೇ ಅಲ್ಲ; ಒಂದು ಒಳ್ಳೇ ಪುಸ್ತಕ ಓದಿದಾಗ, ಒಂದು ಒಳ್ಳೆಯ ಸಂಗೀತ ಕೇಳಿದಾಗ, ಒಂದು ಒಳ್ಳೆಯ ನಾಟಕ ನೋಡಿದಾಗ, ಒಂದು ಉತ್ತಮ ಚಿತ್ರಕಲೆ ಕಂಡಾಗ ನಮಗೆ ಈ ಅನುಭವ ಆಗುತ್ತೆ. ಇದನ್ನು ಅನುಭೂತಿ ಅನ್ನಬಹುದು. ಈ ಅನುಭೂತಿ ಪಡೆಯಲು ನಾವು ನಮ್ಮ ಅಭಿರುಚಿಯನ್ನು ಉತ್ತಮಪಡಿಸಿಕೊಳ್ಳಬೇಕು.

ಸಿನಿಮಾ ಕೇವಲ ಕಥೆ ಹೇಳುವ ಮಾಧ್ಯಮವಲ್ಲ. ಒಳ್ಳೆಯ ಸಿನಿಮಾದ ಕಥೆ ಒಬ್ಬ ವ್ಯಕ್ತಿಯ ಕಥೆಯಾಗಿರುವುದಿಲ್ಲ. ಅದರಲ್ಲಿ ಒಂದು ಸಮೂಹದ ಕಥೆಯಿರುತ್ತದೆ. ಆ ಕಥೆ ಹೇಳುವ ಮೂಲಕ ಆ ನಿರ್ದೇಶಕ ಏನನ್ನೋ ಧ್ವನಿಸಲು ಪ್ರಯತ್ನಿಸುತ್ತಿರುತ್ತಾನೆ. ಅವನ ನಿರೂಪಣೆಗೆ ಅನೇಕ ಆಯಾಮಗಳಿರುತ್ತವೆ. ಅದರಲ್ಲಿ ಸಾಮಾಜಿಕ, ಸಾಂಸ್ಕೃತಿಕ ಹಾಗೂ ರಾಜಕೀಯ ಪ್ರಜ್ಞೆ ಮಿಳಿತಗೊಂಡಿರುತ್ತದೆ. ಇವೆಲ್ಲವನ್ನೂ ನಾವು ಗ್ರಹಿಸಲು ಸಾಧ್ಯವಾದರೆ ಆಗ ನಾವೂ ಒಬ್ಬ ಒಳ್ಳೆಯ ಪ್ರೇಕ್ಷಕರಾಗುತ್ತೇವೆ. ಆಗ ಸಿನಿಮಾ ಬರೀ ಟೈಂಪಾಸ್ ಆಗಿರುವುದಿಲ್ಲ. ಸಿನಿಮಾಕ್ಕೆ ಕೊಡುವ ನಮ್ಮ ಸಮಯ ವ್ಯರ್ಥವಾಗಿ ಹೋಗುವುದಿಲ್ಲ.

ಒಂದು ಒಳ್ಳೆಯ ಸಿನಿಮಾದಲ್ಲಿ ಉತ್ಕೃಷ್ಟ ಚಿತ್ರಕಥೆ ಇರುತ್ತದೆ, ವಿಭಿನ್ನ ನಿರೂಪಣಾ ತಂತ್ರವಿರುತ್ತದೆ. ವೈಶಿಷ್ಟ್ಯಪೂರ್ಣ ಅಭಿನಯ ಇರುತ್ತದೆ. ಅರ್ಥಪೂರ್ಣ ಸಂಭಾಷಣೆಗಳಿರುತ್ತವೆ. ಧ್ವನಿಪೂರ್ಣವಾದ ಸಂಗೀತ ಇರುತ್ತದೆ, ಶಕ್ತಿಶಾಲಿ ಬಿಂಬಗಳಿರುತ್ತವೆ. ಪದರ ಪದರಗಳಲ್ಲಿ ಸಿನಿಮಾ ಭಿನ್ನ ಭಿನ್ನ ವಿಚಾರಗಳನ್ನು ಹೇಳುತ್ತಿರುತ್ತದೆ. ಇವುಗಳನ್ನು ಗುರುತಿಸೋ ಅಭ್ಯಾಸ ಮಾಡಿಕೊಂಡರೆ ಒಂದು ಸಿನಿಮಾವನ್ನು ಸಂಪೂರ್ಣವಾಗಿ ಆಸ್ವಾದಿಸಬಹುದು. ಆಗ ಸಿನಿಮಾ ವೀಕ್ಷಿಸಿ ಚಿತ್ರಮಂದಿರದಿಂದ ಹೊರಬಂದ ತಕ್ಷಣ ಅದು ಮರೆತುಹೋಗುವುದಿಲ್ಲ. ನಮ್ಮೊಂದಿಗೆ ಉಳಿದು ನಮ್ಮನ್ನ ಪದೇ ಪದೇ ಕಾಡುತ್ತಿರುತ್ತದೆ. ಈ ಕಾಡುವಿಕೆಯ ಕಾಣ್ಕೆಯನ್ನು ‘ಗಾಂಧಿ’ ಸಿನಿಮಾದ ಉದಾಹರಣೆಯ ಮೂಲಕ ಸ್ಪಷ್ಟಪಡಿಸಿಕೊಳ್ಳಬಹುದು.

ಅಕ್ಟೋಬರ್ 2 ಮಹಾತ್ಮ ಗಾಂಧಿಯವರ ಜನ್ಮದಿನ. ಅವರು ಹುಟ್ಟಿ ನೂರ ಐವತ್ತು ವರ್ಷಗಳೇ ಸಂದುಹೋದವು. ಅವರನ್ನು ನಾವು ನೋಡಿದ್ದು ಫೋಟೊಗಳಲ್ಲಿ. ಅದು ಬಿಟ್ಟರೆ ಕಪ್ಪುಬಿಳುಪಿನ ಸಾಕ್ಷ್ಯಚಿತ್ರಗಳ ತುಣುಕುಗಳಲ್ಲಿ ಮಾತ್ರ. ಆದರೆ, ಸರಿಸುಮಾರು ನಲವತ್ತು ವರ್ಷಗಳ ಹಿಂದೆ ಗಾಂಧಿಯನ್ನು, ಅವರ ಬದುಕು–ಹೋರಾಟವನ್ನು ನಮ್ಮ ಮುಂದೆ ದೃಶ್ಯಗಳ ಮೂಲಕ ಪ್ರತಿಷ್ಠಾಪಿಸಲಾಯಿತು, ‘ಗಾಂಧಿ’ ಎಂಬ ಮಹತ್ವದ ಸಿನಿಮಾದ ಮೂಲಕ! ಆ ಚಲನಚಿತ್ರವನ್ನು ಅನೇಕ ಮಂದಿ ನೋಡಿದ್ದಾರೆ. ಗಾಂಧಿಯನ್ನು ಕಣ್ತುಂಬಿಕೊಂಡು ಸಂಭ್ರಮಿಸಿದ್ದಾರೆ. ಅದೊಂದು ಉತ್ತಮ ಸಿನಿಮಾ ಎಂದು ಖುಷಿಪಟ್ಟಿದ್ದಾರೆ. ಅದರ ಗುಣಗ್ರಹಣ ಮಾಡಿದ್ದಾರೆ. ಅನೇಕರು ಅನೇಕ ಬಗೆಯಲ್ಲಿ ವಿಶ್ಲೇಷಿಸಿದ್ದಾರೆ. ಆ ಚಿತ್ರ ನಮಗೆ ಯಾಕೆ ಒಳ್ಳೆಯದಾಗಿ ಕಾಣಿಸಿತು? ಅದನ್ನು ನೀವು ಹೇಗೆ ಗ್ರಹಿಸಿದಿರಿ?

‘ಗಾಂಧಿ’ ಚಲನಚಿತ್ರ ಮಾಡಲು ಅದರ ನಿರ್ದೇಶಕ ಸುಮಾರು ಇಪ್ಪತ್ತು ವರ್ಷ ಶ್ರಮಿಸಿದರಂತೆ. ಚಿತ್ರೀಕರಣಕ್ಕಷ್ಟೇ ಅಲ್ಲ; ಹಣ ಹೊಂದಿಸಲು, ಗಾಂಧಿ ಕುರಿತು ಸಂಶೋಧನೆ ಮಾಡಲು, ಚಿತ್ರಕಥೆ ರಚಿಸಲು ಮತ್ತು ಸೂಕ್ತ ಕಲಾವಿದರು, ತಂತ್ರಜ್ಞರು, ಚಿತ್ರೀಕರಣ ತಾಣಗಳನ್ನ ಹುಡುಕಲು!

ಇಲ್ಲೊಂದು ಸೋಜಿಗ ಗಮನಿಸಬೇಕು. ಗಾಂಧಿ ಚಿತ್ರದ ಚಿತ್ರಕಥೆ ಬರೆದ ಜಾನ್ ಬ್ರೈಲೆ (ಅಮೆರಿಕ), ನಿರ್ದೇಶಕ ರಿಚರ್ಡ್ ಆಟನ್‌ಬರೋ (ಬ್ರಿಟನ್), ಗಾಂಧಿ ಪಾತ್ರಧಾರಿ ಬೆನ್ ಕಿಂಗ್‌ಸ್ಲೆ (ಬ್ರಿಟನ್ ಸಂಜಾತ) – ಎಲ್ಲರೂ ಹೊರಗಿನವರು, ವಿದೇಶಿಯರು! ಇರಲಿ, ನಾವು ಈ ಚರ್ಚೆಗೆ



**ಒಳ್ಳೆಯ ಸಿನಿಮಾದ ಕಥೆ ಒಬ್ಬ ವ್ಯಕ್ತಿಯ ಕಥೆಯಾಗಿರುವುದಿಲ್ಲ. ಅದರಲ್ಲಿ ಒಂದು ಸಮೂಹದ ಕಥೆಯಿರುತ್ತದೆ. ಆ ಕಥೆ ಹೇಳುವ ಮೂಲಕ ನಿರ್ದೇಶಕ ಏನನ್ನೋ ಧ್ವನಿಸಲು ಪ್ರಯತ್ನಿಸುತ್ತಿರುತ್ತಾನೆ. ಅವನ ನಿರೂಪಣೆಗೆ ಅನೇಕ ಆಯಾಮಗಳಿರುತ್ತವೆ. ಅದರಲ್ಲಿ ಸಾಮಾಜಿಕ, ಸಾಂಸ್ಕೃತಿಕ ಹಾಗೂ ರಾಜಕೀಯ ಪ್ರಜ್ಞೆ ಮಿಳಿತಗೊಂಡಿರುತ್ತದೆ.**